agitation where none exists. The Government is determined to maintain Law and Order and will brook no violation of the law of the land.

ಶ್ರೀ ಕೋಣಂದೂರು ಲಿಂಗಪ್ಪ.—ಬೆಳಗಾಂ ನಗರದಲ್ಲಿ ಕೆಲವು ಜನ ಮಾರಾಠಿಗರು ದೌರ್ಜನ್ಯಗಳನ್ನು ಮತ್ತು ಘೋಷಣೆಗಳನ್ನು ಕೂಗುವ ಸಂದರ್ಭದಲ್ಲಿ ಅಲ್ಲಿನ ಕನ್ನಡಿಗರ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆಸಿದ್ದಾರೆ ಎಂದು ತಾವು ಹೇಳಿದ್ದೀರಿ. Compulsory knowledge of Kannada is not prescribed for entry into State services ಎಂದು ಹೇಳಿದ್ದೀರಿ. ಯಾವುದೇ ಸ್ವಾಭಿಮಾನ ಇರತಕ್ಕಂಥ ಸರಕಾರವಿದನ್ನು ಅನುಸರಿಸಿಕೊಂಡು ಹೋಗುತ್ತದೆಯೇ ಎಂದು ಹೇಳುತ್ತೇನೆ. ಕೆಲಸಗಳಿಗೆ ಸೇರತಕ್ಕಂಥ ಎಲ್ಲರೂ ಕನ್ನಡವನ್ನು ಕಲಿಯಬೇಕೆಂದು ಹೇಳುವ ನೀತಿಯನ್ನು ಇನ್ನು ಮುಂದಾದರೂ ಅನುಸರಿಸುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳಿರತಕ್ಕ ಅಂಶವನ್ನು ಸರಕಾರ ಯೋಚಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಬೆಳಗಾಂ ನಗರದಲ್ಲಿ ಮರಾಠಿ ಭಾಷೆಯಲ್ಲಿ ನಾಮಫಲಕಗಳು, ಕನ್ನಡದ ಜೊತೆಗೆ ಇಂಗ್ಲೀಷ್ ನಾಮಫಲಕಗಳು ಇದ್ದರೆ ಏನು ಮುಂದುವರಿಯುವುದಕ್ಕೆ ಅಭ್ಯಂತರವಿಲ್ಲ ಕನ್ನಡಿಗರು ಬಾಂಬೆಯಲ್ಲಿ ವಾಸ ಮಾಡುತ್ತಿದ್ದಾರೆ ಕನ್ನಡದಲ್ಲಿ ಬೋರ್ಡನ್ನು ಹಾಕಿಕೊಂಡು ಅಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮದು ವೈಯಕ್ತಿಕವಾಗಿ ವಿರೋಧವಿಲ್ಲ. ಯಾವ ರೀತಿ ಬೆಳಗಾಂನಲ್ಲಿ ಮರಾಠಿಗರು ವಾಸಮಾಡುತ್ತಿದ್ದಾರೆ ? ಅವರು ಮರಾಠಿ ಭಾಷೆಯಲ್ಲಿ ನಾಮಫಲಕಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಅದೇ ರೀತಿ ನಮ್ಮ ಕನ್ನಡಿಗರಿಗೂ ಬಾಂಬೆಯಲ್ಲಿ ಕನ್ನಡ ಭಾಷೆಯಲ್ಲಿ ನಾಮಫಲಕಗಳನ್ನು ಹಾಕಿಕೊಂಡು ವಾಸ ಮಾಡುವುದಕ್ಕೆ ಅವಕಾಶವಿರಬಾರದೇನು ? ಅವರ ಮೇಲೆ ಬಾಂಬೆಯಲ್ಲಿ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಬೆಳಗಾಂನಲ್ಲಿ ಅಫೀಸರ್ಸ್ ಮನೆ ಮುಂದೆ ಮತ್ತು ಆಫೀಸುಗಳಲ್ಲಿ ಮರಾಠಿಯ ನಾಮಫಲಕಗಳ ಹೊರತು ಬೇರೆ ಯಾವ ಭಾಷೆಯಲ್ಲಿಯೂ ನಾಮಫಲಕಗಳನ್ನು ಹಾಕದಿರುವುದಕ್ಕೆ ಏನು ಕಾರಣ ? ಮರಾಠಿ ಭಾಷೆಯು ನಾಮಫಲಕಗಳನ್ನು ಏಕೆ ತೆಗೆದು ಹಾಕಬಾರದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮರಾಠಿಯೊಳಗೆ ಓದಿಕೊಂಡು ಮರಾಠಿ ಮಾತನಾಡತಕ್ಕ ಜನ ಇರತಕ್ಕಂಥ ಆ ಜಾಗದಲ್ಲಿ ನಾಮಫಲಕಗಳು ಮರಾಠಿಯಲ್ಲಿ ಇರುವುದಕ್ಕೆ ಏನೂ ಅಡ್ಡಿಯಿಲ್ಲ. ಅದರ ಜೊತೆಗೆ ಕನ್ನಡ ಇಂಗ್ಲೀಷ್ ಬೋರ್ಡುಗಳು ಇವೆ. ಅಲ್ಲಿ ಮರಾಠಿ ಮಾತನಾಡತಕ್ಕ ಜನರು ಇರುವುದರಿಂದ ಅವರ ಅನುಕೂಲಕ್ಕೋಸ್ಕರ ಮರಾಠಿ ನಾಮಫಲಕಗಳು ಇರತಕ್ಕಂಥಾದ್ದೂ ಅವಶ್ಯಕವಾಗಿದೆ ; ಇದ್ದರೆ ತಪ್ಪೇನೂ ಇಲ್ಲ.

(iii) ***Re : Issue of G.O. regarding removal of nightsoil***

SRI T. R. SHAMANNA (Fort).—While appreciating the stand taken by the Government to ban the practice of removal of nightsoil by hand or head, I call the attention of the Hon. Minister for Municipal Administration to the inconvenience caused to the public due to the issue of the Government Order regarding romoval of nightsoil.

SRI B. BASAVALINGAPPA (Minister for Muncipal Administration).—Sir I make the following statement.

The age old morbid practice of removal of night soil by hand or by head or any other manual handling is stopped from 15th August 1973. Where there is Underground Drainage Scheme in existence, it has been made compulsory for the individual house owners to connect their latrines to the Underground Drainage System.

Every sanitary privy of the water closet type is required to be connected to sewer system in the local areas wherever the sewerage system is available.

(SRI B. BASAVALINGAPPA)

Wherever sewerage system is not available, it has been made Compulsary for the individual house owners to convert dry latrines to water-borne latrines by providing septic tanks.

Where conversion of dry latrines to water-borne latrines is also not possible, it has been made compulsory to construct mud pits with a stone slab on ; the inside walls of pits being constructed of bricks or stone rubless to support the covering stone slab. Converting night soil and garbage into agricultural manure is being actively considered.

The Municipalities have been instructed to provide financial assistance to the needy persons for implementing the scheme and to incur expenditure upto Rs. 50/- towards the poor and the needy. Government have also sanctioned grant-in-aid of Rs. 20 lakhs during [1]June 1973, to the Muncipalities for the said purpose.

MOTION TO ELECT MEMBERS TO

(i) *The Commitee on Public Uncdertakings.*

SHRI D. DEVARAJ URS (Chief Minister).—I beg to move

> "That this Assembly do proceed to elect nine members to the Committee on public Undertakings in accordance with sub-rule (1) (a) of Rule 256-B of the Rules of Procedure and Conduct of Business in the Mysore Legis lative Assembly"

MADAM SPEAKER.—Motion moved.

> "That this Assembly do proceed to elect nine members to the Committee on Public Undertakings in accordance with sub-rule (1) (a) of Rule 256-B of the Rules of Procedure and Conduct of Business in the Mysore Legislative Assembly."

ಶ್ರೀ ಎಚ್. ಟಿ. ಕೃಷ್ಣಪ್ಪ.—ನಮಗೆ ಗೊತ್ತಿರುವ ಹಾಗೆ ಲೆಜಿಸ್ಲೇಟಿವ್ ಕೌನ್ಸಿಲ್ ಸೆಷನ್ ಇದ್ದಂಥ ಸಂದರ್ಭದಲ್ಲಿ ಈ ಮೋಷನ್ ಬರಬೇಕಾಗಿತ್ತು ಇದು ಸಂಪ್ರದಾಯ ಆದರೆ ಈಗ ಬಂದಿರುವುದು ಅಕಾಲಿಕ ವಾಗಿದೆ. ಆದ್ದರಿಂದ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕುವ ಸಂದರ್ಭದಲ್ಲಿಯಾಗಲೀ, ಅಸೆಂಬ್ಲಿ ಮತ್ತು ಕೌನ್ಸಿಲ್ ಎರಡು ಒಟ್ಟಿಗೆ ಅಧಿವೇಶನದಲ್ಲಿರುವಂಥ ಸಂದರ್ಭದಲ್ಲಿ ನೋಡಿಕೊಂಡು ಇದನ್ನು ತರಬೇಕಾಗಿತ್ತು. ಈಗಾಗಲೇ ಪಿ.ಯು.ಪಿ. ಕಮಿಟಿ ಕೆಲವು ಕೆಲಸಗಳನ್ನು ಮಾಡುತ್ತಿದೆ. ಅದರ ಅಧಿ ಕಾರವನ್ನು ವೊಟಕು ಮಾಡುವ ಉದ್ದೇಶದಿಂದ ಈ ಮೋಷನ್ ಅನ್ನು ತಂದಿದ್ದೀರಿ ಎಂದು ನಾವು ಗುಮಾನಿ ಪಡಬೇಕಾದಂಥ ವಿಷಯ ಇದು.

ಶ್ರೀ ಕಾಗೋಡು ತಿಮ್ಮಪ್ಪ.—ರೂಲ್ ೨೫೬ (ಬಿ) ಪ್ರಕಾರ ಇದಕ್ಕೆ ಅವಕಾಶ ಇದೆ. ಆದರೆ ಪಿ.ಯು.ಪಿ. ಕಮಿಟಿಯವರು ಕೆಲವು ಕಾರ್ಯಕ್ರಮಗಳನ್ನು ಅರ್ಧ ಮಾಡಿದ್ದಾರೆ. ಇನ್ನೂ ಕೆಲವು ಕೆಲಸ ಗಳನ್ನು ಪೂರ್ಣಗೊಳಿಸಲಿದ್ದಾರೆ. ಅವರ ಕೆಲಸ ಪೂರ್ಣವಾಗುವವರೆಗೆ ಈಗ ಇರತಕ್ಕಂಥ ಕಮಿಟಿಯನ್ನು